**ಒ.ಎಸ್.ನಂ.  163/13**
**ಪಿ.  ಡಬ್ಲೂ-1**

**ದಿನಾಂಕಃ 12.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು :-  ಪ್ರತಿವಾದಿ ಪರ ವಕೀಲರಿಂದಃ-**

ನಾನು ದಾವಾ ಸ್ವತ್ತಿನ ಮಾಲೀಕಳು ಎಂದು ದಾವೆ ಸಲ್ಲಿಸಿರುತ್ತೇನೆ. ಸುಮಾರು 20 ವರ್ಷಗಳ ಹಿಂದೆ ನನಗೆ ದಾವಾ ಸ್ವತ್ತು ಮಂಜೂರು ಆಗಿರುತ್ತದೆ. ದಾವಾ ಸ್ವತ್ತಿನ ಪಕ್ಕದ ಜಮೀನು ಸರ್ವೇ ನಂ 150/ಪಿ49 ರಲ್ಲಿ 3 ಎಕರೆ ಜಮೀನನ್ನು ನಾನು, ನನ್ನ ಗಂಡ, ನನ್ನ ಅತ್ತೆ, ಪ್ರತಿವಾದಿಗಳ ತಂದೆಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಮುಂದುವರೆದು 2 ಎಕರೆ ಜಮೀನು ಮಾರಾಟ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ನನ್ನ ಅತ್ತೆ ಹೆಸರಿನಲ್ಲಿ 4 ಎಕರೆ 20 ಗುಂಟೆ ಜಮೀನು ಇತ್ತು. ನನ್ನ ಅತ್ತೆ ಹೆಸರಿನಲ್ಲಿ 4 ಎಕರೆ 20 ಗುಂಟೆ ಜಮೀನು ಇತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ನಾವು ಜಮೀನು ಕ್ರಯಕ್ಕೆ ಕೊಟ್ಟ ದಿನದಿಂದಲೇ ಪ್ರತಿವಾದಿಗಳು ತೊಂದರೆ ಕೊಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ತೊಂದರೆ ಕೊಟ್ಟಿರುವ ಬಗ್ಗೆ ಪೊಲೀಸ್ ಠಾಣೆಗೆ ದೂರು ಕೊಟ್ಟಿಲ್ಲ, ಪ್ರತಿವಾದಿಗಳೇ ದೂರು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ವಿಚಾರವಾಗಿ ನಾನು ಹಂಪಾಪುರ ಪೊಲೀಸ್ ಠಾಣೆಯಲ್ಲಿ ಹೇಳಿಕೆ ಕೊಟ್ಟಿರುತ್ತೇನೆ. ಪ್ರತಿವಾದಿಗಳ ತಂದೆ ಖರೀದಿಸಿದ ಜಮೀನಿಗೆ ನಾವು ತೊಂದರೆ ಕೊಡುತ್ತಿದ್ದೇವೆ ಎಂದು ದಿಃ 30.01.2010 ರಂದು ಪ್ರತಿವಾದಿಗಳ ತಂದೆ ನಮ್ಮ ವಿರುದ್ಧ ದೂರು ಕೊಟ್ಟಿದ್ದರು ಎಂದರೆ ಸರಿ. ಸದರಿ ದೂರಿಗೆ ಹಂಪಾಪುರ ಪೊಲೀಸ್ ಠಾಣೆಯವರು NCR ನೀಡಿರುತ್ತಾರೆ ಎಂದರೆ ಸರಿ. ಸದರಿ NCR ಪ್ರತಿಯನ್ನು ನಿಡಿ 1 ಎಂದು ಗುರುತಿಸಲಾಯಿತು. ದಾವಾ ಸ್ವತ್ತಿನ ದಕ್ಷಿಣಕ್ಕೆ ಪ್ರತಿವಾದಿಗಳ ಜಮೀನು ಬರುತ್ತದೆ. ದಾವಾ ಸ್ವತ್ತಿನ ದಕ್ಷಿಣದ ಕಡೆಗೆ ಪ್ರತಿವಾದಿಗಳ ಜಮೀನು ಇರುತ್ತದೆ ಎಂದು ಬರೆಸಿರುತ್ತೇನೆ. ಸದರಿ ದಕ್ಷಿಣದ ಕಡೆಗೆ ಚಂದ್ರಶೇಖರಯ್ಯ ರವರ ಜಮೀನು ಎಂದು ನಮೂದಿಸಿ ಪ್ರತಿವಾದಿಗಳ ಜಮೀನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನನ್ನ ಮಗ ಪ್ರತಿವಾದಿಗಳ ವಿರುದ್ಧ PTCL 5/2013 ರಂತೆ ಪ್ರಕರಣ ದಾಖಲಿಸಿದ್ದರು ಎಂದರೆ ಸರಿ. ಸದರಿ ಪ್ರಕರಣ ವಜಾ ಆಗಿರುತ್ತದೆ ಎಂದರೆ ಸರಿ. ಸದರಿ ಪ್ರಕರಣದ ಆದೇಶ ಪ್ರತಿಯನ್ನು ನಿಡಿ 2 ಎಂದು ಗುರುತಿಸಲಾಯಿತು. ದಿಃ 02.11.2007 ರಂದು ಪ್ರತಿವಾದಿಗಳ ಜಮೀನಿಗೆ ತೊಂದರೆ ಕೊಡುವುದಿಲ್ಲ ಎಂದು ಪ್ರಮಾಣ ಪತ್ರ ಬರೆದುಕೊಟ್ಟಿರುತ್ತೇನೆ ಎಂದರೆ ಸರಿ. ಸದರಿ ಪ್ರಮಾಣ ಪತ್ರವನ್ನು ಸಾಕ್ಷಿ ಒಪ್ಪಿಕೊಂಡಿದ್ದರಿಂದ ನಿಡಿ 3 ಎಂದು ಗುರುತಿಸಲಾಯಿತು. ದಿಃ06.01.2011 ರಂದು ಒಪ್ಪಂದ ಕರಾರು ಮಾಡಿ ಪ್ರತಿವಾದಿಗಳ ಜಮೀನಿಗೆ ತೊಂದರೆ ಕೊಡಬಾರದು ಎಂದು ಸಾಕ್ಷಿಗಳ ಸಮಕ್ಷಮ ರೂ.25 ಸಾವಿರ ಹಣ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಒಪ್ಪಂದ ಕರಾರಿಗೆ ನಾನು ಮತ್ತು ನನ್ನ ಕುಟುಂಬದವರು ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನ ಹೆಸರಿನಲ್ಲಿ ಇರುವ ಒಂದು ಎಕರೆ ಜಮೀನಿನಲ್ಲಿ ಬೋರವೆಲ್ ಕೊರೆಸಿರುತ್ತಾರೆ. ಬೋರವೆಲ್ ಯಾವ ಜಮೀನಿನಲ್ಲಿ ಇರುತ್ತದೆ ಎಂದು ಗುರುತಿಸಲು ನ್ಯಾಯಾಲಯದ ನಿಯೋಗಿಯನ್ನು ನೇಮಿಸಲು ತೊಂದರೆ ಇಲ್ಲ ಎಂದರೆ ಸರಿ. ಪ್ರತಿವಾದಿಗಳು ನಮ್ಮ ಸ್ವತ್ತಿಗೆ ಯಾವುದೇ ತೊಂದರೆ ಕೊಟ್ಟಿಲ್ಲ, ಪ್ರತಿವಾದಿಗಳಿಂದ ಇನ್ನಷ್ಟು ಹಣ ಪಡೆಯಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನೇ ಪ್ರತಿವಾದಿಗಳಿಗೆ ತೊಂದರೆ ಕೊಟ್ಟು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ.**